8

# ಯೇಸುವು ಭೂಲೋಕಕ್ಕೆ ಯಾಕೆ ಬಂದನು?

*“ ‘ಮಾಡಬೇಕೆಂದು ನೀನು ನನಗೆ ಕೊಟ್ಟ ಕೆಲಸವನ್ನು ನಾನು ನೆರವೇರಿಸಿ, ನಿನ್ನನ್ನು ಭೂಲೋಕದಲ್ಲಿ ಮಹಿಮೆಪಡಿಸುವೆನು’ ” (ಯೋಹಾನ 17:4).*

ಸುದ್ದಿಗಳನ್ನು ವರದಿ ಮಾಡುವವನು ನಮ್ಮ ಪಟ್ಟಣದಲ್ಲಿ ರಸ್ತೆಬದಿಯಲ್ಲಿ ನೀವು ನಡೆಯುತ್ತಿರುವಾಗ ನಿಮ್ಮ ಪಕ್ಕದಲ್ಲಿ ಬಂದು, “ಜಗತ್ತಿನ ಪ್ರಾರಂಭದಿಂದ ಸಂಭವಿಸಿದ ಅತೀ ದೊಡ್ಡ ಒಂದು ಘಟನೆಯು ಯಾವುದೆಂದು ನೀವು ನಂಬುತ್ತೀರಿ?” ಎಂದು ಕೇಳಿದರೆ, ನೀವು ಏನು ಹೇಳುತ್ತೀರಿ? ಅವನಿಗೆ ಏನೆಂದು ಉತ್ತರ ಕೊಡುತ್ತೀರಿ? ಮಾನವ ಚರಿತ್ರೆಯಲ್ಲಿ ಎಲ್ಲಾ ಇತರ ಘಟನೆಗಳಿಗಿಂತ ಮಹತ್ವದೊಂದಿಗೆ ಮೇಲಾಗಿರುವ ಯಾವ ಘಟನೆಯಿರುವುದು? ಅದರ ಬಗ್ಗೆ ನೀವು ಯೋಚಿಸಿದ ನಂತರ, ನಿಶ್ಚಯವಾ ಗಿಯೂ ಇರುವುದು. ನಮ್ಮಲ್ಲಿ ಪ್ರತಿಯೊಬ್ಬರು ಭಿನ್ನವಾದ ಪದಗಳನ್ನು ಉಪಯೋಗಿಸುವೆವು, ಆದರೆ ನಮ್ಮ ಉತ್ತರಗಳು ನಮ್ಮ ಪಾಪಗಳಿಗಾಗಿ ಮರಣ ಹೊಂದಲು ಯೇಸುವಿನ ಆಗಮನದ ಮೇಲೆ ಕೇಂದ್ರೀಕರಿಸುವೆವು.

ಜಗತ್ತಿನ ಇತಿಹಾಸದಲ್ಲಿ ಬಹಳವಾಗಿ ಪರಿಣಾಮ ಮಾಡಿದ ಸಂಭವಿಸುವಿಕೆಯು, ದೇವರ ಕುಮಾರನಾದ ಯೇಸುವಿನ ಜೀವನ, ನರಾವತಾರ ಮತ್ತು ದೇಹಧರಿಸಿದ್ದು ಆಗಿರುವುದು. ಯೇಸುವು ದೇವರ ರೂಪದಲ್ಲಿ ಅಸ್ತಿತ್ವದಲ್ಲಿದ್ದರೂ, ಯಾವ ಕ್ರಯ ಕೊಟ್ಟಾದರೂ ದೇವರೊಂದಿಗೆ ಸರಿಸಮಾನನಾಗಿರುವಂತೆ ಅಂಟಿಕೊಳ್ಳಲಿಲ್ಲ. ಆತನು “ತನ್ನನ್ನು ಬರಿದು ಮಾಡಿಕೊಂಡನು, ದಾಸನ ರೂಪವನ್ನು ಧರಿಸಿಕೊಂಡನು” ಮತ್ತು “ಮನುಷ್ಯರಿಗೆ ಸದೃಶನಾದನು” (ಫಿಲಿಪ್ಪಿ 2:6, 7). ಯೋಹಾನನ ಪ್ರಕಾರವಾಗಿ, “ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು” (ಯೋಹಾನ 1:14).

*ಕ್ರಿಸ್ತನು ದೈವತ್ವವಿಲ್ಲದವನಾಗಿರುವನೋ ಎನ್ನುವಷ್ಟು ಮಾನವನೂ ಮತ್ತು ಆತನು ಮಾನವನೇ ಆಗಿರುವುದಿಲ್ಲ ಎನ್ನುವಷ್ಟು ದೈವಿಕನೂ ಆಗಿದ್ದನೆಂದು* ನಾವು ಹೇಳಬಹುದು. ಯೇಸುವು ತನ್ನ ಮಾನವನಾಗುವಿಕೆಯಲ್ಲಿ ಮಾನವ ಕುಲದೊಂದಿಗೆ ತನ್ನನ್ನು ಸಂಪೂರ್ಣವಾಗಿ ಗುರುತಿಸಿಕೊಂಡನು. ಎಲ್ಲಾ ಮಾನವರು ಜನಿಸುವಂತೆ ಆತನು ಜನಿಸಿದನು (ಲೂಕ 2:6), ಎಲ್ಲಾ ಮಾನವರು ಬೆಳೆಯುವಂತೆ ಬೆಳೆದನು (ಲೂಕ 2:40), ಎಲ್ಲಾ ಮಾನವರು ವಾರಸುದಾರರಾಗಿದ್ದಂತೆ ಆತನು ಎಲ್ಲಾ ಹಿಂಸೆಗಳಿಗೆ ಗುರಿಯಾದನು

(ಇಬ್ರಿಯ 5:8, 9) ಮತ್ತು ರೋಗದಿಂದ, ಕ್ಷಯವಾಗುವುದರಿಂದ ಮತ್ತು ಮರಣದಿಂದ ಪರಿಣಾಮಕ್ಕೊಳಗಾಗುವ ದೇಹದಲ್ಲಿ ಜೀವಿಸಿದನು - ಆ ದೇಹವನ್ನು ಮಾನವರು ಶಿಲುಬೆಯ ಮೇಲೆ ಕೊಲ್ಲಲೂ ಬಹುದಿತ್ತು (ಫಿಲಿಪ್ಪಿ 2:8, 9). ಆತನು ಸಂಪೂರ್ಣವಾಗಿ ಮಾನವನಾಗಿದ್ದನು; ಆದಾಗ್ಯೂ ಆತನು ಸಂಪೂರ್ಣವಾಗಿ ದೈವಿಕನಾಗಿದ್ದನು ಮತ್ತು ಹೀಗೆ, ದೇವರ ಕುಮಾರನಾಗಿದ್ದನು (ಇಬ್ರಿಯ 2:14, 17, 18). ಆತನು ಮಾನವತೆ ಹಾಗೂ ದೈವತ್ವವು ಒಂದು ವ್ಯಕ್ತಿತ್ವದಲ್ಲಿ ಪರಿಪೂರ್ಣ ಸಮ್ಮಿಳನವಾಗಿದ್ದನು. ಆತನು ತನ್ನ ದೈವತ್ವವನ್ನು ತ್ಯಾಗಮಾಡಿದ ಮನುಷ್ಯನಾದನು; ಆತನು ನಮ್ಮಂತೆ ಆದರೂ ಆತನು ದೈವಿಕನಾಗಿಯೇ ಉಳಿದುಕೊಂಡಿದ್ದನು.

ಭೂಲೋಕಕ್ಕೆ ಯೇಸುವಿನ ಬರೋಣದ ಸ್ವಭಾವವು ಕೆಲವು ಅದ್ಭುತವಾದ ಮಹತ್ವದ ಪ್ರಶ್ನೆಗಳನ್ನು ಎಬ್ಬಿಸುತ್ತದೆ: ಆತನು ಬಂದ ರೀತಿಯಲ್ಲಿ ಯೇಸುವು ಯಾಕೆ ಭೂಲೋಕಕ್ಕೆ ಬಂದನು? ಮಾನವ ಕುಲದಲ್ಲಿ ಆತನು ಪ್ರವೇಶಿಸುವುದರಲ್ಲಿ, ನಮ್ಮ ಮಧ್ಯದಲ್ಲಿ ಜೀವಿಸುವುದರಲ್ಲಿ ಮತ್ತು ಶಿಲುಬೆಯ ಮೇಲೆ ಮರಣ ಹೊಂದುವುದರಲ್ಲಿ ಯಾವ ಉದ್ದೇಶವಿತ್ತು. ಸಂಪೂರ್ಣವಾಗಿ ಮಾನವನಾಗುವ ಮಟ್ಟಕ್ಕೆ ದೇವರ ದೈವಿಕ ಕುಮಾರನು ಯಾಕೆ ತಗ್ಗಿಸಿಕೊಂಡನು? ಈ ಪ್ರಶ್ನೆಗಳಿಗೆ ಉತ್ತರಗಳು ಒಂದೇ ವಾಕ್ಯದಲ್ಲಿ ಸಂಕ್ಷೇಪಿಸಲ್ಪಡ ಬಹುದು: "*ಆತನು ತನ್ನ ಸೇವೆ, ಮರಣ ಮತ್ತು ಪುನರುತ್ಥಾನದಿಂದ - ತನ್ನ ಸಭೆ ಎಂದು ಆತನು ಕರೆಯುವ ಆತನ ಹೆಸರಿಗಾಗಿ ಒಂದು ಜನಾಂಗವನ್ನು ಕರೆಯಲು ಆತನು ಬಂದನು.*"

ಈ ಭೂಲೋಕಕ್ಕೆ ಆತನ ಸಂದರ್ಶನದ ಪರಿಣಾಮವು ಸಭೆಯಾಗಿದೆ ಎಂದು ಬೇರೆ ಮಾತಿನಲ್ಲಿ ಹೇಳಬಹುದು. ಯೇಸುವು ಒಂದು ಪುಸ್ತಕ ಬರೆಯಲಿಲ್ಲ, ಒಂದು ಕಾಲೇಜನ್ನು ಸ್ಥಾಪಿಸಲಿಲ್ಲ, ಒಂದು ಪ್ರಾಪಂಚಿಕ ಕುಟುಂಬವನ್ನು ಬೆಳಸಲಿಲ್ಲ, ಇಲ್ಲವೇ ಅದೃಷ್ಟದ ಬಹುಮಾನದ ಮುಖಾಂತರ ಒಂದು ದತ್ತಿನಿಧಿಯನ್ನು ರಚಿಸಲಿಲ್ಲ. ಆತನ ಭೂಲೋಕದ ಸೇವೆಯು ಉತ್ಪಾದಿಸಿದ ನಿಜವಾದ ವಾಸ್ತವಿಕತೆಯು ಸಭೆಯಾಗಿತ್ತು. ಯೇಸುವು ತಾನೆಂದಾದರೂ ಕಟ್ಟುವೆನೆಂದು ಹೇಳಿದ ಕೇವಲ ದೇಹವು ಆತ್ಮಿಕ ದೇಹ ವಾಗಿತ್ತು, ಆತನು ಅದನ್ನು "ಸಭೆ" ಎಂದು ಕರೆದನು (ಮತ್ತಾಯ 16:18). ಯೇಸುವು ತನ್ನ ಸೇವೆಯಲ್ಲಿ ಹಾಕಿದ ಒಂದೇ ಅಸ್ತಿವಾರವು ಸಭೆಗಾಗಿ ಹಾಕಿದ ಅಸ್ತಿವಾರವಾಗಿತ್ತು. ಆದುದರಿಂದ, ಸಭೆಯು ಕ್ರಿಸ್ತನ ಭೂಲೋಕದ ಆಗಮನದ *ಏಕೈಕ ಸೃಷ್ಟಿಯಾಗಿದೆ* ಎಂದು ಹೇಳಬಹುದು.

## ಸುವಾರ್ತೆಗಳಿಂದ ದೃಢಪಡಿಲ್ಪಟ್ಟಿರುವುದು

ಈ ಸತ್ಯವು ಸುವಾರ್ತೆಗಳಿಂದ ಬಲವಾಗಿ ದೃಢಪಡಿಸಲ್ಪಟ್ಟಿರುವುದು, ಪ್ರತಿಯೊಂದು ಸವಾರ್ತೆಯು, ಯೇಸುವು ತನ್ನ ಮರಣ ಮತ್ತು ಪುನರುತ್ಥಾನದ ನಂತರ ಬರುವ ಮೊದಲನೆಯ ಪಂಚಾಶತ್ತಮ ದಿನದಂದು ಸ್ಥಾಪಿಸುವ ಸಭೆಯ, ಪರಲೋಕ ರಾಜ್ಯದ ಕಡೆಗೆ ತೋರಿಸುತ್ತದೆ ಮತ್ತು ಅದಕ್ಕೆ ನಡಿಸುತ್ತದೆ.

ಸುವಾರ್ತೆಗಳಲ್ಲಿ ಒಬ್ಬನು ಕ್ರಿಸ್ತನ ಜೀವಿತವನ್ನು ಅಧ್ಯಯನ ಮಾಡುವಾಗ, ಆತನ ಸೇವೆಯ ಬಗ್ಗೆ ಉದ್ಭವಿಸುವ ಮೂರು ವಿಷಯಗಳಿಂದ ಆಕರ್ಷಿಸಲ್ಪಡುತ್ತಾನೆ: (1) ಆತನು ಸಾಧಿಸಲು ಹೊರಟ ನಿಯೋಗ, (2) ಆತನ ಕಾರ್ಯದ ಸಿದ್ಧತೆಯ ಸ್ವಭಾವ, ಮತ್ತು (3) ಆತನ ಸೇವೆಯ ಅಪರಿಪೂರ್ಣ ಗುಣಲಕ್ಷಣ.

*ಮೊದಲನೆಯದು, ಸುವಾರ್ತೆಗಳು ಯೇಸುವು ತನ್ನ ವೈಯಕ್ತಿಕ ಸೇವೆಯ ಅವಧಿಯಲ್ಲಿ ಜಗತ್ತಿಗೆ ಸುವಾರ್ತೆಯನ್ನು ಸಾರಿ ತೋರಿಸಲು ಪ್ರಯತ್ನಿಸಲಿಲ್ಲ*

*ಎಂಬುದನ್ನು ತೋರಿ ಸುತ್ತವೆ.* ಆತನು ತನ್ನ ಅಪೊಸ್ತಲರನ್ನು ಆಯ್ಕೆಮಾಡಿಕೊಂಡ ತರುವಾಯ, ಅವರು ಪ್ರಸಂಗಿಸುವುದಕ್ಕಾಗಿ ವಿಶೇಷ ವಿಶ್ವವ್ಯಾಪಿ ಆಜ್ಞೆಯನ್ನು ಅವರಿಗೆ ಕೊಡಲಿಲ್ಲ, "ಅನ್ಯ ಜನಗಳ ಕಡೆಗೆ ಹೋಗಬೇಡಿರಿ; ಸಮಾರ್ಯರ ಊರೊಳಗೆ ಕಾಲಿಡಬೇಡಿರಿ; ಇವರನ್ನು ಬಿಟ್ಟು ತಪ್ಪಿಸಿಕೊಂಡು ಕುರಿಗಳಂತಿರುವ ಇಸ್ರಾಯೇಲಿನ ಮನೆತನದವರ ಬಳಿಗೆ ಹೋಗಿರಿ" (ಮತ್ತಾಯ 10:5, 6) ಎಂದು ಹೇಳುವುದರಿಂದ ಅವರ ಉತ್ಸಾಹವನ್ನು ಶಾಂತಗೊಳಿಸಿದನು. ಯೇಸುವು ತನ್ನ ಸೇವೆಯ ಅವಧಿಯಲ್ಲಿ ತನ್ನನ್ನು ಪಾಲೆಸ್ತೀನಿಗೆ ಮಿತಿಗೊಳಿಸಲ್ಪಟ್ಟಿದ್ದ ನಮಗೆ ಆಶ್ಚರ್ಯವನ್ನುಂಟುಮಾಡುತ್ತದೆ. ಹೊರಗಿನ ರೋಮನ್ ಪ್ರದೇಶಗಳಿಗೆ ಆತನು ಎಂದೂ ಹೋಗಲಿಲ್ಲ. ಜಗತ್ತಿನ ಒಂದು ಬಹಳ ಸಣ್ಣ ಕ್ಷೇತ್ರದಲ್ಲಿ ಆತನ ಪ್ರಸಂಗಿಸುವಿಕೆ ಮತ್ತು ಬೋಧನೆಯಿಂದ ಆತನ ನಿಯೋಗವು ಪೂರೈಸಲ್ಪಟ್ಟಿತು. ಯೇಸುವು ತನ್ನ ವೈಯಕ್ತಿಕ ಸೇವೆಯ ಅವಧಿಯಲ್ಲಿ ಜಗತ್ತಿಗೆ ಸುವಾರ್ತೆಯನ್ನು ಸಾರಲು ಹೊರಟಿದ್ದರೆ ಆತನು ತನ್ನ ಸೇವೆಯನ್ನು ಸಂಪೂರ್ಣವಾಗಿ ಭಿನ್ನವಾದ ವಿಶಾಲವಾದ ಯೋಜನೆಗಳನ್ನು ಮತ್ತು ವಿಧಾನಗಳನ್ನು ಅನುಸರಿಸಬಹುದಿತ್ತು.

*ಎರಡನೆಯದು, ಯೇಸುವಿನ ಜೀವನ, ಕಾರ್ಯಗಳು, ಮತ್ತು ಮರಣವು ಬರಲಿಕ್ಕಿದ್ದ ಯಾವುದೋ ಒಂದಕ್ಕಾಗಿ ಸಿದ್ಧತೆಯಾಗಿದ್ದವು ಎಂಬುದನ್ನು ಸುವಾರ್ತೆಗಳು ಸೂಚಿಸುತ್ತವೆ.* "ಪರಲೋಕ ರಾಜ್ಯವು ಸಮೀಪಿಸಿತು, ದೇವರ ಕಡೆಗೆ ತಿರುಗಿಕೊಳ್ಳಿರಿ" (ಮತ್ತಾಯ 4:17) ಎಂದು ಯೇಸುವು ಪ್ರಸಂಗಿಸಿದನು. ಪರ್ವತ ಪ್ರಸಂಗದಲ್ಲಿ, ಆತನು ತನ್ನ ಶಿಷ್ಯರಿಗೆ, "ನಿನ್ನ ರಾಜ್ಯವು ಬರಲಿ" (ಮತ್ತಾಯ 6:10) ಎಂದು ಪ್ರಾರ್ಥಿಸಲು ಕಲಿಸಿದನು. ಜನ ಸಮೂಹಗಳು ತನ್ನ ಅದ್ಭುತ ಕಾರ್ಯಗಳಿಂದ ಮಿತಿಮೀರಿ ಆಕರ್ಷಿಸಲ್ಪಟ್ಟು, ಅದರ ಪರಿಣಾಮವಾಗಿ ತನ್ನನ್ನು ತಮ್ಮ ಭೂಲೋಕದ ಅರಸನನ್ನಾಗಿ ಮಾಡಲು ವಿಚಾರಿಸುವುದನ್ನು ತಡೆಗಟ್ಟುವಲ್ಲಿ ಯೇಸುವು ಜಾಗರೂಕನಾಗಿದ್ದನು. ತನ್ನ ದಿನಚರಿಯನ್ನಾಗಲೀ ಇಲ್ಲವೇ ಕಾರ್ಯ ಸೂಚಿಯನ್ನಾಗಲೀ ಜನಸಮೂಹಗಳು ಆಜ್ಞಾಪಿಸುವುದಕ್ಕೆ ಆತನು ಬಿಡಲಿಲ್ಲ, ಆತನು ಅದ್ಭುತ ಕಾರ್ಯವನ್ನು ಮಾಡಿದಾಗ, ಯೇಸುವು ಕೆಲವು ಸಲ, ಅದ್ಭುತವನ್ನು ಹೊಂದಿದವನಿಗೆ, "ಯಾರಿಗೂ ಹೇಳಬೇಡ" ಎಂದು ಹೇಳಿದನು (ಮತ್ತಾಯ 8:4).[1] ಆತನು ಹನ್ನೆರಡು ಜನ ಅಪೊಸ್ತಲರನ್ನು ಆಯ್ದುಕೊಂಡನು ಮತ್ತು ಅವರನ್ನು ವೈಯಕ್ತಿಕವಾಗಿ ತರಬೇತುಗೊಳಿಸಿದನು. ಆದರೆ ಆತನು ಅವರನ್ನು ತಾನು ಹೊರಟು ಹೋದನಂತರ ಅವರು ಮಾಡ ಬೇಕಾಗಿದ್ದ ಕೆಲಸಕ್ಕಾಗಿ ತರಬೇತುಗೊಳಿಸುತ್ತಿದ್ದನು ಎಂಬುದು ಸ್ಪಷ್ಟವಾಗಿದೆ (ಯೋಹಾನ 14:19).

*ಮೂರನೆಯದು, ಯೇಸುವಿನ ಸೇವೆಯನ್ನು ಸುವಾರ್ತೆಗಳು ಅದರ ಬಗ್ಗೆ ಪೂರ್ತಿಯಾಗದಿರುವ ಅರ್ಥದಲ್ಲಿ ಚಿತ್ರಿಸುತ್ತವೆ.* ಯೇಸುವು ತಂದೆಯು ತನಗೆ ಏನು ಮಾಡಬೇಕೆಂದು ಹೇಳಿದ್ದನೋ ಅದನ್ನು ಮಾಡಿದನು, ಆದರೆ ತನ್ನ ಜೀವಿತದ ಅಂತ್ಯದಲ್ಲಿ, ಆತನು ತನ್ನ ದಿವಾರೋಹಣದ ನಂತರ ಬರುವ ಇತರ ಘಟನೆಗಳನ್ನೂ ಪ್ರಕಟನೆಗಳನ್ನೂ ನಿರೀಕ್ಷಿಸಲು ಹನ್ನೆರಡು ಜನರನ್ನು ಆತನು ಸಿದ್ಧಪಡಿಸಿದನು. "ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪರಿಶುದ್ಧಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು" (ಯೋಹಾನ 14:26) ಎಂದು ಯೇಸು ಅಪೊಸ್ತಲರಿಗೆ ಹೇಳಿ ದನು. ಆತನು ಅವರಿಗೆ ಮತ್ತೇ ಹೀಗೆ ಹೇಳಿದನು, "ಸತ್ಯದ ಆತ್ಮನು ಬಂದಾಗ ಆತನು ನಿಮ್ಮನ್ನು ನಡಿಸಿಕೊಂಡು ಹೋಗಿ ಸಕಲ ವಿಷಯದಲ್ಲಿಯೂ ಸತ್ಯಕ್ಕೆ ಸೇರಿ ಸುವನು. ಆತನು ತನ್ನಷ್ಟಕ್ಕೆ ತಾನೇ ಮಾತಾಡದೆ ಕೇಳಿದ ಮಾತುಗಳನ್ನೇ ಆಡುವನು; ಮತ್ತು

ಮುಂದಾಗುವ ಸಂಗತಿಗಳನ್ನು ತಿಳಿಸುವನು" (ಯೋಹಾನ 16:13). ಪುನರುತ್ಥಾನದ ನಂತರ, ದಿವಾರೋಹಣಕ್ಕೆ ಸ್ವಲ್ಪ ಮೊದಲು, ಯೇಸುವು ಮೇಲಣಿಂದ ಬಲವನ್ನು ಹೊಂದುವ ವರೆಗೆ ಯೆರೂಸಲೇಮಿನಲ್ಲಿ ಕಾದು ಕೊಂಡಿರಬೇಕೆಂದು ತನ್ನ ಅಪೊಸ್ತಲರಿಗೆ ಆಜ್ಞಾಪಿಸಿದನು. ಬಲವನ್ನು ಹೊಂದಿದ ನಂತರ ಅವರು ಯೆರೂಸಲೇಮಿನಿಂದ ಪ್ರಾರಂಭಿಸಿ, ಮಾನಸಾಂತರವನ್ನು ಮತ್ತು ಪಾಪಗಳ ಪರಿಹಾರವನ್ನು ಎಲ್ಲಾ ಜನಾಂಗಗಳಿಗೆ ಪ್ರಸಂಗಿಸಬೇಕಾಗಿತ್ತು (ಲೂಕ 24:46-49).

ತನ್ನ ಮರಣದ ಮೊದಲಿನ ಹಾಗೂ ಅನಂತರದ ನಮ್ಮ ಕರ್ತನ ಸೇವೆಯ ಈ ಗುಣಲಕ್ಷಣಗಳು ಭೂಮಿಯ ಮೇಲಿನ ಆತನ ಸೇವೆಯು ಆತನ ರಾಜ್ಯದ, ಸಭೆಯ ಸ್ಥಾಪನೆಗಾಗಿ ಅವಶ್ಯಕ ಸಂಗತಿಗಳನ್ನು ಒಂದಾಗಿ ತರುವದಾಗಿತ್ತು ಎಂದು ದೃಢತೆಯಿಂದ ಹೇಳುತ್ತದೆ. ಮತ್ತಾಯ 16:18ರಲ್ಲಿ ಯೇಸುವು ತನ್ನ ಶಿಷ್ಯರಿಗೆ ತನ್ನ ಭೂಲೋಕದ ಕೆಲಸದ ಭಾರವನ್ನು ಪ್ರಕಟಿಸಿದನು: "ನಾನೂ ನಿನಗೆ ಒಂದು ಮಾತನ್ನು ಹೇಳುತ್ತೇನೆ; ಅದೇನಂದರೆ - ನೀನು ಪೇತ್ರನು; ಈ ಬಂಡೆಯ ಮೇಲೆ ನನ್ನ ಸಭೆಯನ್ನು ಕಟ್ಟುವೆನು; ಪಾತಾಳಲೋಕದ ಬಲವು ಅದನ್ನು ಸೋಲಿಸಲಾರದು." *ಹೀಗೆ, ಯೇಸುವು ಸುವಾರ್ತೆಯನ್ನು ಸಾರುವುದಕ್ಕೆ ಬರಲಿಲ್ಲ; ಪ್ರಸಂಗಿಸಲು ಒಂದು ಸುವಾರ್ತೆ ಇರಬೇಕೆಂದು ಆತನು ಬಂದನು.*

ಪ್ರಸಿದ್ಧ ಶಿಲ್ಪಿ ಗುಟ್ಜೋನ ಬೊರ್ಗಲುಮ್‌ನು, ಸೌತ್ ಡಕೋಟಾಲ್ಲಿ ಪ್ರಸಿದ್ಧ ಮೌಂಟ್ ರುಷ್ಮೋರ ಕೆತ್ತಿದವನು, ವಾಶಿಂಗ್ಟನ್ ಡಿ.ಸಿ. ಯಲ್ಲಿ ಕಪಿಟೋಲಿಗಾಗಿ ಅಬ್ರಹಾಮ ಲಿಕಂನ್‌ನ ತಲೆಯ ಶಿಲ್ಪ ಕೆಲಸ ಮಾಡಿದನು. ಅವನು ಅದನ್ನು ತನ್ನ ಸ್ಟುಡಿಯೋದಲ್ಲಿ ಮಾರ್ಬಲ್ ಬಂಡೆಯಿಂದ ಕೆತ್ತಿದನು. ಅವನ ಸ್ಟುಡಿಯೋವನ್ನು ಸ್ವಚ್ಛಮಾಡಲು ಪ್ರತಿದಿನ ಮುಂಜಾನೆ ಬರುತ್ತಿದ್ದ ಮಹಿಳೆಯು ಜೀವಿಸುವಂತ್ತಿದ್ದ ಆ ಶಿಲ್ಪವನ್ನು ಮೊದಲ ಬಾರಿಗೆ ನೋಡಿ, ಆಕೆ ಆಶ್ಚರ್ಯಚಕಿತಳಾಗಿ ನಿಂತುಕೊಂಡು, "ಆ ಕಲ್ಲಿನ ಬಂಡೆಯಲ್ಲಿ ಲಿಂಕನ್ನನು ಬಂಧಿಸಲ್ಪಟ್ಟಿದ್ದನ್ನು ಅವನು ಹೇಗೆ ತಿಳಿದಿದ್ದನು?" ಎಂದು ಕೇಳಿದಳು. ಇತರರು ನೋಡಿದ್ದನ್ನು ಬೊರ್ಗಲುಮ್‌ನು ನೋಡಬಲ್ಲನು ಎಂಬುದು ಆಕೆಯ ಪ್ರಶ್ನೆಗೆ ಉತ್ತರವಾಗಿತ್ತು. ಅವನಿಗೆ ಕಲಾಕಾರನ ದೃಷ್ಟಿಯಿತ್ತು ಹಾಗೂ ಶಿಲ್ಪಿಯ ಗ್ರಹಣ ಶಕ್ತಿಯಿತ್ತು, ಅವನ ಸುರಿತ ಕೈಗಳು ಹಾಗೂ ದಾರ್ಶನಿಕ ಮನಸ್ಸು ಅದನ್ನು ಹೊರಗೆ ತರುವ ಮೊದಲು ಅವನು ಕಲ್ಲಿನಲ್ಲಿ ಮುಖವನ್ನು ನೋಡಬಲ್ಲವನಾಗಿದ್ದನು.

ಸುವಾರ್ತೆಗಳ ಸಹಾಯದಿಂದ, ನಾವು ಯೇಸುವು ತನ್ನ ಭೂಲೋಕದ ಸೇವೆಯ ಸಮಯದಲ್ಲಿ ನೋಡಿದ್ದನ್ನು ನೋಡಬಹುದು. ಬರಲಿಕ್ಕಿದ್ದ ರಾಜ್ಯದ ದರ್ಶನವು ಮತ್ತು ಅದಕ್ಕಾಗಿ ಸಿದ್ಧತೆಯು ಆತನ ಸೇವೆಯಲ್ಲಿ ಬಂಧಿಸಿಡಲ್ಪಟ್ಟಿತು, ಆತನು ಅದರ ಬಗ್ಗೆ ಪ್ರಸಂಗಿಸಿದನು, ಅದಕ್ಕಾಗಿ ಸಿದ್ಧತೆ ಮಾಡಿದನು ಮತ್ತು ಅದನ್ನು ತನ್ನ ರಕ್ತದಿಂದ ಕೊಂಡುಕೊಂಡನು.

## ಅಪೊಸ್ತಲರ ಕೃತ್ಯಗಳಿಂದ ದೃಢಪಡಿಸಲ್ಪಟ್ಟಿತು

ಯೇಸುವಿನ ಸೇವೆ, ಮರಣ ಮತ್ತು ಪುನರುತ್ಥಾನದ ಹಿಂದೆ ಸಭೆಯನ್ನು ಸೃಷ್ಟಿಸುವ, ದೇವರ ರಾಜ್ಯವನ್ನು ತರುವ ನಿಯಂತ್ರಿಸುವ ಬಲವು ಇತ್ತೆಂದು ಅಪೊಸ್ತಲರ ಕೃತ್ಯಗಳ ಗ್ರಂಥವು ದೃಢಪಡಿಸುತ್ತದೆ. ಸುವಾರ್ತೆಗಳು ನೇರವಾಗಿ ಸತ್ಯವನ್ನು ಸಾರುತ್ತವೆ, ಮತ್ತು ಅಪೊಸ್ತಲರ ಕೃತ್ಯಗಳ ಪುಸ್ತಕವು ಸಜೀವ - ಬಣ್ಣದ ದೃಷ್ಟಾಂತಗಳಿಂದ ಪ್ರಕಟಿಸುವಿಕೆಯನ್ನು ದೃಢಪಡಿಸುತ್ತದೆ.

ನಮ್ಮ ಕರ್ತನ ದಿವಾರೋಹಣದ ಹತ್ತು ದಿನಗಳ ನಂತರ, ಪರಿಶುದ್ಧಾತ್ಮನು

ಅದ್ಭುತಕರವಾಗಿ ಪಂಚಾಶತ್ತಮ ದಿನದಂದು ಅಪೊಸ್ತಲರಿಗೆ ಕೊಡಲ್ಪಟ್ಟನು (ಅಪೊಸ್ತಲರ ಕೃತ್ಯಗಳು 2:1-4); ಯೇಸುವಿನ ಮರಣದ, ಹೂಣಿಡುವಿಕೆಯ ಮತ್ತು ಪುನರುತ್ಥಾನದ ಸುವಾರ್ತೆಯು ಮೊದಲನೆಯ ಸಲ ಪ್ರಸಗಿಸಲ್ಪಟ್ಟಿತು; ಜನರು ಈ ಸುವಾರ್ತೆಗೆ ನಂಬಿಕೆ, ಮಾನಸಾಂತರ ಮತ್ತು ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮದಿಂದ ಉತ್ತರ ಕೊಡಲು ಆಮಂತ್ರಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 2:38; ಲೂಕ 24:46, 47); ಪ್ರಸಂಗಿಸಲ್ಪಟ್ಟ ವಾಕ್ಯವನ್ನು ಸ್ವೀಕರಿಸುವುದರಿಂದ ಮತ್ತು ಬಾಪ್ತಿಸ್ಮ ಮಾಡಿಸಿಕೊಳ್ಳುವುದರಿಂದ ಮೂರು ಸಾವಿರ ಜನರು ಆ ಆಮಂತ್ರಣವನ್ನು ಸ್ವೀಕರಿಸಿದರು (ಅಪೊಸ್ತಲರ ಕೃತ್ಯಗಳು 2:41). ಆದುದರಿಂದ, ರಾತ್ರಿಯು ದಿನವನ್ನು ಹಿಂಬಾಲಿಸುವಂತೆ ಯೇಸುವಿನ ಸೇವೆಯನ್ನು ಹಿಂಬಾಲಿಸಿ, ನಮ್ಮ ಕರ್ತನ ಸಭೆಯು ಹುಟ್ಟಿತು.

ಅಪೊಸ್ತಲರ ಕೃತ್ಯಗಳ ಉಳಿದ ಕಥೆಯು, ಪರಿಶುದ್ಧಾತ್ಮ ಪ್ರೇರಿತಿಯ ಜ್ವಾಲೆಯಂತೆ, ಯೆರೂಸಲೇಮಿನಿಂದ ಯೂದಾಯಕ್ಕೆ ಮತ್ತು ಸಮಾರ್ಯಕ್ಕೆ ಹಾಗೂ ಅದನ್ನು ದಾಟಿ, ರೋಮನ್ ಸಮ್ರಾಜ್ಯದ ಇತರ ಭಾಗಗಳಿಗೆ ಚಲಿಸಿದ ಸಭೆಯ ಕಥೆಯಾಗಿದೆ, ಅಪೊಸ್ತಲರ ಕೃತ್ಯಗಳಲ್ಲಿ ಎಲ್ಲೆಲ್ಲಿ ಪ್ರೇರೇಪಿತ ಪ್ರಸಂಗಿಸುವಿಕೆಯು ಸಂಭವಿಸಿತೋ ಅಲ್ಲಿ, ಕೇಳುಗರು ಪ್ರಸಂಗಿಸಿದ ವಾಕ್ಯಕ್ಕೆ ವಿಧೇಯರಾಗುವುದರಿಂದ ಸಭೆಯೊಳಗೆ ಬರುವುದರಿಂದ ಪ್ರತಿಕ್ರಿಯೆ ತೋರಿಸಿದರು. ಅಪೊಸ್ತಲರ ಕೃತ್ಯಗಳಲ್ಲಿ ಸವಾರ್ತಾ ಪ್ರಸಂಗ ಪ್ರಯಾಣಗಳು ಮಾಡಲ್ಪಟ್ಟಾಗ, ಜಗತ್ತಿನ ಹೊಸ ಕ್ಷೇತ್ರಗಳಲ್ಲಿ ಸಭೆಗಳು ಎಚ್ಚರಿಕೆಯಲ್ಲಿ ಇಡಲ್ಪಟ್ಟವು, ಅಪೊಸ್ತಲರ ಕೃತ್ಯಗಳಲ್ಲಿ ಪೌಲನ ಮೂರು ಸುವಾರ್ತಾ ಪ್ರಸಂಗ ಪ್ರಯಾಣಗಳು, ಯೆರೂಸಲೇಮಿನಿಂದ ಇಲ್ಲೂರಿಕದವರೆಗೆ ಜಗತ್ತಿನಲ್ಲೆಲ್ಲಾ ಸಭೆಗಳು ನೆಡಲ್ಪಟ್ಟವು (ರೋಮಾಪುರ 15:19). ಸಭೆಯು ಕ್ರಿಸ್ತನ ಭೂಲೋಕಕ್ಕೆ ಆಗಮಿಸಿದ್ದರ ಪರಿಣಾಮವಾದದ್ದು ಎಂಬ ಅದ್ಭುತಕರವಾದ ತೀರ್ಮಾನವನ್ನು ಹೊಸದಾಗಿ ಗಮನಿಸದೇ ಯಾರೂ ಅಪೊಸ್ತಲರ ಕೃತ್ಯವನ್ನು ಓದಲಾರರು.

---

*ಯೇಸುವು ಸುವಾರ್ತೆಯನ್ನು*
*ಸಾರುವುದಕ್ಕೆ ಬರಲಿಲ್ಲ;*
*ಪ್ರಸಂಗಿಸಲು ಒಂದು ಸವಾರ್ತೆ*
*ಇರಬೇಕೆಂದು ಆತನು ಬಂದನು.*

---

“ಜಗತ್ತಿಗೆ ಸುವಾರ್ತೆ ಸಾರುವ ಕಾರ್ಯದಲ್ಲಿ ಯೇಸುವು ಉಪಯೋಗಿಸಿದಂಥ ಅದೇ ವಿಧಾನಗಳನ್ನು ನಾವು ಅನುಸರಿಸತಕ್ಕದ್ದು. ನಮ್ಮ ಸುತ್ತಲೂ ಹನ್ನೆರಡು ಜನರನ್ನು ಕೂಡಿಸೋಣ ಮತ್ತು ನಮ್ಮ ಮುಂದಿನ ಕಾರ್ಯಕ್ಕಾಗಿ ಅವರನ್ನು ತರಬೇತಿ ಗೊಳಿಸೋಣ. ಯೇಸುವು ಉಪಯೋಗಿಸಿದ ವಿಧಾನದಲ್ಲಿ ಯೇಸುವು ನಮಗೆ ಜಗತ್ತಿಗೆ ಹೇಗೆ ಸುವಾರ್ತೆಯನ್ನು ಸಾರಬೇಕು ಎಂಬುದನ್ನು ನಮಗೆ ತೋರಿಸುತ್ತಾನೆ” ಎಂದು ಒಬ್ಬ ಪ್ರಸಂಗಿಯು ಹೇಳಿದ್ದನ್ನು ನಾನು ಕೇಳಿಸಿಕೊಂಡಿದ್ದೇನೆ. ನಿಶ್ಚಯವಾಗಿ, ಯೇಸುವು ತಾನು ಮಾಡಿದ ಪ್ರತಿಯೊಂದರಲ್ಲಿ ಪರಿಪೂರ್ಣನಾಗಿದ್ದನು. ಹೀಗಿದ್ದರೂ, ಆತನ ಸೇವೆಯ ಸಂಪೂರ್ಣವಾದ ಅಧ್ಯಯನವು, ಆತನ ಸೇವೆಯ ಸಮಯದಲ್ಲಿ ಆತನ ಸೇವಾ ಕಾರ್ಯಾವು ಜಗತ್ತಿಗೆ ಸುವಾರ್ತೆ ಸಾರುವುದು ಆಗಿರಲಿಲ್ಲ ಎಂಬುದನ್ನು ಪ್ರಕಟಿಸುತ್ತದೆ. ಅದು ಸಭೆಗಾಗಿ ಅಸ್ತಿವಾರ ಹಾಕುವುದಾಗಿತ್ತು; ಜಗತ್ತಿಗೆ ಸುವಾರ್ತೆ ಸಾರುವುದಕ್ಕಾಗಿ ನೀಲನಕ್ಷೆಯ ತುಂಡುಗಳನ್ನು ಒಂದಾಗಿ ಕೂಡಿಸುವುದಾಗಿತ್ತು. ತನ್ನ

ಕಾರ್ಯಕ್ಕೆ ಆತನ ವಿಧಾನವಾಗಿ, ಆತನು ತನ್ನ ವಿಶೇಷವಾದ ನಿಯೋಗದ ನೆರವೇ ರಿಕೆಗಾಗಿ, ಆತನು ನಮಗೆ ಕೊಟ್ಟ ವಿಶ್ವವ್ಯಾಪಿ ಸುವಾರ್ತಾ ಸೇವೆಗಾಗಿ ಯೋಗ್ಯವಾದ ಮಾರ್ಗಗಳನ್ನೂ ವಿಧಾನಗಳನ್ನೂ ನೇಮಿಸಿದನು.

ಅದರ ಪ್ರಕಾರವಾಗಿ, ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿ ಅಪೊಸ್ತಲರು ಮತ್ತು ಇತರ ಪ್ರೇರೇಪಿತ ಜನರು ನಮ್ಮ ಕರ್ತನು ಉಪಯೋಗಿಸಿದ ಅದೇ ವಿಧಾನವನ್ನು ಉಪಯೋಗಿಸಿದ್ದನ್ನು ನಾವು ನೋಡುವುದಿಲ್ಲ, ಕರ್ತನು ಮಾಡಿದಂತೆ ತರಬೇತಿ ಕೊಡಲು ಅವರು ತಮ್ಮ ಸುತ್ತಲೂ ಹನ್ನೆರಡು ಜನರನ್ನು ಕೂಡಿಸಲಿಲ್ಲ! ಆತನ ವಿಧಾನವನ್ನು ಅನುಕರಿಸಲಿಲ್ಲ. ತಮ್ಮ ಪ್ರಸಂಗಿಸುವಿಕೆಯಿಂದಲೂ ಬೋಧನೆ ಯಿಂದಲೂ ಅಪೊಸ್ತಲರೂ ಇತರ ಪ್ರೇರೇಪಿತ ಜನರು ಅನೇಕರನ್ನು ಸಭೆಯೊಳಗೆ ತಂದರು; ಈ ನೂತನ ಕ್ರೈಸ್ತರು ಆಗ ಪೋಷಿಸಲ್ಪಟ್ಟರು, ತರಬೇತಿಗೊಳಿಸಲ್ಪಟ್ಟರು ಪ್ರೋತ್ಸಾಹಿಸಲ್ಪಟ್ಟರು, ಮತ್ತು *ಸಭೆಯ ಒಂದು ಭಾಗದಂತೆ ಸಭೆಯಿಂದ* ಸೇವೆಗಾಗಿ ಹಾಗೂ ಸುವಾರ್ತಾ ಪ್ರಸಾರಣೆಗಾಗಿ ಕಳಿಸಲ್ಪಟ್ಟು. ಯೇಸುವಿನ ಭೂಲೋಕದ ಸೇವೆಯ ಫಲದಂತೆ ಸಭೆಯ ಜೀವಿತವನ್ನು ಅಪೊಸ್ತಲರ ಕೃತ್ಯವು ನಮಗೆ ತೋರಿಸುತ್ತದೆ. ಕ್ರಿಸ್ತ ಜೀವಿತವು ಹೊಸ ಒಡಂಬಡಿಕೆಯ 48 ಪರ್ಸೆಂಟ್ ಭಾಗವಾಗಿರುತ್ತದೆ; ಇತರ 52 ಪರ್ಸೆಂಟ್ ಭಾಗವು ಕ್ರಿಸ್ತನ ಜೀವನ, ಮರಣ ಮತ್ತು ಪುನರುತ್ಥಾನವು ಉತ್ಪಾದಿಸಿದ್ದನ್ನು - ಸಭೆಯನ್ನು ಕುರಿತಾದದ್ದಾಗಿರುತ್ತದೆ.

## ಪತ್ರಿಕೆಗಳಿಂದ ಪುನಃ ದೃಢಪಡಿಸಲ್ಪಟ್ಟಿತು

ಹೊಸ ಒಡಂಬಡಿಕೆಯ ಪತ್ರಿಕೆಗಳು, ಸಭೆಯು ಕ್ರಿಸ್ತನ ಭೂಲೋಕದ ಜೀವನ ಮತ್ತು ಮರಣದ ಸ್ವಾಭಾವಿಕ ಫಲವಾಗಿದೆ ಎಂಬ ಸತ್ಯದ ಅನ್ವಯವನ್ನು ಒತ್ತಿ ಹೇಳುತ್ತವೆ, ಸುವಾರ್ತೆಗಳು ಈ ಸತ್ಯವನ್ನು ಒಪ್ಪಿಕೊಳ್ಳುತ್ತವೆ ಅಪೊಸ್ತಲರ ಕೃತ್ಯಗಳು ಅದನ್ನು ವಿಸ್ತರಿಸುತ್ತದೆ ಮತ್ತು ಪತ್ರಿಕೆಗಳು ಅದನ್ನು ಅನ್ವಯಿಸುತ್ತವೆ. ಕ್ರಿಸ್ತನ ಆತ್ಮಿಕ ದೇಹವಾಗುವುದರಿಂದ ಕ್ರಿಸ್ತನ ಜೀವಿತಕ್ಕೆ ನಾವು ಹೇಗೆ ಉತ್ತರ ಕೊಡಬೇಕೆಂಬುದನ್ನು ಪತ್ರಿಕೆಗಳು ನಮಗೆ ತೋರಿಸುತ್ತವೆ.

ನಂಬಿಕೆಯ ಮತ್ತು ವಿಧೇಯತೆಯ ಮುಖಾಂತರ ಕ್ರಿಸ್ತನ ಬಳಿಗೆ ಬರುವುದನ್ನು ಆಯ್ದುಕೊಂಡ ಜನರಿಗೆ ಪತ್ರಿಕೆಗಳು ಬರೆಯಲ್ಪಟ್ಟಿವೆ. ಕ್ರಿಸ್ತನ ಜೀವನ ಮರಣ ಮತ್ತು ಪುನರುತ್ಥಾನಗಳ ಪರಿಣಾಮವು ಹೊಸದಾಗಿದ್ದ ಸಮಯದಲ್ಲಿ ಅವರು ಜೀವಿಸಿದ್ದರು. ಪ್ರೇರೇ ಪಿತ ಜನರ ಸಂದೇಶಗಳ ಅರ್ಥಸೂಚನೆಯು ಕ್ರಿಸ್ತನು ಕರ್ತನಂತೆ ಗೌರವಿಸಲ್ಪಡಬೇಕು ಮತ್ತು ನಮ್ಮ ಮಧ್ಯದೊಳಗಿನ ಆತನ ವಾಸವು ನಾವು ಆತನ ಸಭೆಯಾಗುವುದರಿಂದ ಯೋಗ್ಯವಾಗಿ ಸ್ವೀಕರಿಸಲ್ಪಡಬೇಕು ಎಂಬುದಾಗಿತ್ತು.

ಪ್ರತಿಯೊಂದು ಪತ್ರಿಕೆಯಲ್ಲಿ ಕ್ರಿಸ್ತನ ಅನುಯಾಯಿಗಳು ಕ್ರಿಸ್ತನ ಆತ್ಮಿಕ ದೇಹದಂತೆ ಜೀವಿಸಲು ಮತ್ತು ಸೇವೆ ಮಾಡಲು ಒತ್ತಾಯಿಸಲ್ಪಟ್ಟಿದ್ದಾರೆ. ಪತ್ರಿಕೆಗಳು, ಒಟ್ಟಾಗಿ ತರಲ್ಪಡುವಾಗ, ನಿಜವಾಗಿಯೂ, ಎಲ್ಲಾ ರೀತಿಯ ಪರಿಸ್ಥಿತಿಗಳಲ್ಲಿ ಮತ್ತು ಭಿನ್ನವಾದ ಸ್ಥಳಗಳಲ್ಲಿ ಕ್ರಿಸ್ತನ ಸಭೆಯಂತೆ ಹೇಗೆ ಇರಬೇಕೆಂದು ಹಾಗೂ ಹೇಗೆ ಜೀವಿಸಬೇಕು ಎಂಬುದರ ಮೇಲೆ "ಮಾರ್ಗದರ್ಶಿ ಕೈಪಿಡಿಯನ್ನು" ಅದು ಒದಗಿಸುತ್ತದೆ. ಕ್ರಿಸ್ತನ ಭೂಲೋಕದ ಸೇವೆಯನ್ನು ನಮ್ಮ ಜೀವಿತಗಳಿಗೆ ಹೇಗೆ ಅನ್ವಯಿಸ ಬೇಕೆಂಬುದನ್ನು ಅವು ಬೋಧಿಸುತ್ತವೆ.

*ವಿಧೇಯ ವಿಶ್ವಾಸದ ಮುಖಾಂತರ ಆತನ ದೇಹದಲ್ಲಿ ಪ್ರವೇಶಿಸುವುದರಿಂದ ಕರ್ತನಂತೆ ಯೇಸುವಿಗೆ ನಮ್ಮನ್ನು ಒಪ್ಪಿಸಿಕೊಡುತ್ತೇವೆ.* ಪೌಲನು ಈ ವಿಶ್ವಾಸದ

ಉತ್ತರದ ಅಂತಿಮ ಕಾರ್ಯವನ್ನು ಕ್ರಿಸ್ತನನ್ನು ಧರಿಸಿಕೊಳ್ಳುವುದಕ್ಕೆ ಹೋಲಿಸಿದನು (ಗಲಾತ್ಯ 3:27). ಪತ್ರಿಕೆಗಳಿಗೆ ಅನುಸಾರವಾಗಿ, ನಂಬಿಕೆ, ಮಾನಸಾಂತರ, ಮತ್ತು ದೇವರ ಕುಮಾರನಂತೆ ಯೇಸುವನ್ನು ಅರಿಕೆ ಮಾಡುವುದರಿಂದ ಹಿಂಬಾಲಿಸುವ ರಕ್ಷಣೆಗಾಗಿರುವ ಬಾಪ್ತಿಸ್ಮದ ಮುಖಾಂತರ ಆತನ ದೇಹವನ್ನು ಪ್ರವೇಶಿಸುವವರೆಗೆ ಯಾರೂ ಯೇಸುವಿಗೆ ಒಪ್ಪಿಸಿಕೊಡಲಿಲ್ಲ.

*ಆತನ ಆತ್ಮಿಕ ದೇಹದಲ್ಲಿ, ಸಭೆಯಲ್ಲಿ, ದೇವರ ಕುಟುಂಬದಂತೆ ಜೀವಿಸುವುದರಿಂದ ಮತ್ತು ಒಂದಾಗಿ ಆರಾಧಿಸುವುದರಿಂದ ನಾವು ಯೇಸುವಿನ ಜೀವನ, ಮರಣ ಮತ್ತು ಪುನರುತ್ಥಾನವನ್ನು ಗೌರವಿಸುತ್ತೇವೆ.* ಪೌಲನು ಹೀಗೆ ಹೇಳಿದನು,

> ನೀವೆಲ್ಲರು ಕ್ರಿಸ್ತ ಯೇಸುವಿನಲ್ಲಿ ಒಂದೇ ಆಗಿರುವುದರಿಂದ ಯೆಹೂದ್ಯನು ಗ್ರೀಕನು ಎಂದೂ, ಆಳು ಒಡೆಯ ಎಂದೂ, ಗಂಡು ಹೆಣ್ಣು ಎಂದೂ ಭೇದವಿಲ್ಲ (ಗಲಾತ್ಯ 3:28).
>
> ಯಾಕಂದರೆ ನಮಗೆ ಒಂದೇ ದೇಹದಲ್ಲಿ ಬಹಳ ಅಂಗಗಳಿರಲಾಗಿ ಹೇಗೆ ಒಂದೇ ಕೆಲಸ ಇರುವದಿಲ್ಲವೋ ಹಾಗೆಯೇ ನಾವೆಲ್ಲರು ಒಟ್ಟಾಗಿ ಕ್ರಿಸ್ತನಲ್ಲಿ ಒಂದೇ ದೇಹವಾಗಿದ್ದು ಒಬ್ಬೊಬ್ಬರಾಗಿ ಪರಸ್ಪರ ಅಂಗಗಳಾಗಿದ್ದೇವೆ (ರೋಮಾಪುರ 12:4, 5).
>
> ದೇಹದಲ್ಲಿ ಭೇದವೇನೂ ಇರದೆ ಅಂಗಗಳು ಒಂದಕ್ಕೊಂದರ ಹಿತವನ್ನು ಚಿಂತಿಸುವ ಹಾಗೆ ದೇವರು ಕೊರತೆಯುಳ್ಳದ್ದಕ್ಕೆ ಹೆಚ್ಚಾದ ಮಾನವನ್ನು ಕೊಟ್ಟು ದೇಹವನ್ನು ಹದವಾಗಿ ಕೂಡಿಸಿದೆ. ಒಂದು ಅಂಗಕ್ಕೆ ನೋವಾದರೆ ಎಲ್ಲಾ ಅಂಗಗಳಿಗೂ ನೋವಾಗುತ್ತದೆ; ಒಂದು ಅಂಗಕ್ಕೆ ಮರ್ಯಾದೆ ಬಂದರೆ ಎಲ್ಲಾ ಅಂಗಗಳಿಗೂ ಸಂತೋಷವಾಗುತ್ತದೆ. ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ (1 ಕೊರಿಂಥ 12:25-27).
>
> ವಾರದ ಮೊದಲನೆಯ ದಿವಸದಲ್ಲಿ ನಾವು ರೊಟ್ಟಿ ಮುರಿಯುವ ನಿಯಮಕ್ಕಾಗಿ ಕೂಡಿಬಂದಾಗ ಮರುದಿನ ಹೊರಡಬೇಕೆಂದಿದ್ದ ಪೌಲನು ಅವರಿಗೆ ಪ್ರಸಂಗಿಸುತ್ತಾ ಸರಿಹೊತ್ತಿನವರೆಗೂ ಉಪನ್ಯಾಸವನ್ನು ನಡಿಸಿದನು (ಅಪೊಸ್ತಲರ ಕೃತ್ಯಗಳು 20:7).

ದೇವರ ಕುಟುಂಬದಂತೆ, ಕ್ರಿಸ್ತನ ಸಭೆಯಂತೆ ಜೀವಿಸುವುದರಲ್ಲಿ ಮತ್ತು ಆರಾಧಿಸುವುದರಲ್ಲಿ ನಾವು ಸೋತು ಹೋಗುವಾಗ, ಯೇಸುವು ಸಾಧಿಸಲಿಕ್ಕೆ ಬಂದದ್ದರಿಂದ ದೂರಹೋಗುವೆವು ಮತ್ತು ಆತನು ಸ್ಥಾಪಿಸಲು ಮರಣ ಹೊಂದಿದ್ದನ್ನು ಹಾಳು ಮಾಡುವೆವು.

*ನಾವು ತನ್ನ ದೇಹವಾಗಿರಲು, ತನ್ನ ಸಭೆಯಾಗಿರಲು ಯೇಸುವು ನಮ್ಮನ್ನು ಕರೆದಿದ್ದಾನೆ,* ಮತ್ತು ಹೆಚ್ಚು ಬೇರೆಯದಕ್ಕಾಗಿ ಅಲ್ಲ. ಆತನ ಜನರು ಕ್ರಿಸ್ತನ ದೇಹಕ್ಕಿಂತ ಇತರ ಯಾವುದಕ್ಕಿಂತಲೂ ಬೇರೆಯಾಗಿರ ಬೇಕೆಂಬುದಕ್ಕಾಗಿ ಕರೆಯಲ್ಪಟ್ಟರು ಎಂದು ಪತ್ರಿಕೆಗಳು ಎಂದೂ ವಿವರಿಸಿರುವುದಿಲ್ಲ. ಪತ್ರಿಕೆಗಳ ಪ್ರಕಾರ, ಯೇಸುವು ತನ್ನನ್ನು ಹಿಂಬಾಲಿಸಲು ನಮಗೆ ಒಂದೇ ಒಂದು ಮಾರ್ಗವನ್ನು, ತನ್ನ ಸೇವೆಮಾಡಲು ಒಂದೇ ಒಂದು ಮಾರ್ಗವನ್ನು, ತನ್ನ ರಕ್ತವನ್ನು ಮತ್ತು ತಾನು ಸಾಧಿಸಿದ ರಕ್ಷಣೆಯನ್ನು ಸ್ವೀಕರಿಸಲು ಒಂದೇ ಒಂದು ಮಾರ್ಗವನ್ನು ಸೃಷ್ಟಿಸಿದನು. ಆ ಶಕ್ತಿಯುಳ್ಳ ಮಾರ್ಗವು ಈ ಜಗತ್ತಿನಲ್ಲಿ

ಆತನ ಆತ್ಮಿಕ ದೇಹದಂತೆ ನಂಬಿಗಸ್ತಿಕೆಯಿಂದ ಜೀವಿಸುವುದಾಗಿದೆ.

ಮನೆಯ ಮೂಲೆಯಲ್ಲಿ ಒಬ್ಬ ಚಿಕ್ಕ ಬಾಲಕಿ ಒಂದು ಬೈಬಲನ್ನು ಕಂಡುಕೊಂಡಳು. ಆಕೆ ಅದನ್ನು ಮೇಲಕ್ಕೆ ಎತ್ತಿ ಹಿಡಿದು ತನ್ನ ತಾಯಿಗೆ, "ಅಮ್ಮಾ, ಇದು ಯಾವ ಪುಸ್ತಕ ವಾಗಿದೆ?" ಎಂದು ಕೇಳಿದಳು. "ಅದು ದೇವರ ಪುಸ್ತಕ, ಬೈಬಲ್" ಎಂದು ಆಕೆಯ ತಾಯಿ ಹೇಳಿದಳು. ಒಳನೋಟದ ತೀವ್ರತೆಯಿಂದ, "ನಾವು ಇದನ್ನು ಎಂದೂ ಉಪಯೋಗಿಸದೇ ಇರುವುದರಿಂದ, ನಾವು ಇದನ್ನು ಯಾಕೆ ಆತನಿಗೆ ಹಿಂದಿರುಗಿಸ ಬಾರದು?" ಎಂದು ಆ ಚಿಕ್ಕ ಮಗಳು ಹೇಳಿದಳು.

ನಾವು ಅದನ್ನು ಓದಬಹುದು ಆದರೆ ಅದನ್ನು *ನಾವು ನಿಜವಾಗಿಯೂ ಉಪಯೋ ಗಿಸದೇ ಇರಬಹುದು* ಎಂಬುದು ಸತ್ಯವಾಗಿದೆ. ಪ್ರತಿಯೊಂದು ಸಂವಾದದಲ್ಲಿ ನಾವು ಬೈಬಲನ್ನು ಉಲ್ಲೇಖಿಸಬಹುದು, ಅನುದಿನವೂ ಅದನ್ನು ಓದಬಹುದು, ಆದರೆ ಅದನ್ನು *ಅನ್ವಯಿಸುವುದರಲ್ಲಿ ಸೋತು ಹೋಗಬಹುದು,* ಬೈಬಲಿನ ಅಧಿಕೃತ ಅನ್ವಯವು ಕ್ರಿಸ್ತನ ಸಭೆಯಾಗಿರುವುದರಲ್ಲಿ ಕಾರ್ಯಾಚರಣೆಯ ಮಾರ್ಗದಲ್ಲಿ ಅದನ್ನು ಅನುಸರಿಸುವುದನ್ನು ನಮಗೆ ಕೇಳುತ್ತದೆ. ಏನಾಗಬೇಕೆಂದು ಬೈಬಲು ನಮಗೆ ಬೋಧಿಸುವುದೋ ಅದು ನಾವಾಗುವಾಗ ಮಾತ್ರವೇ, ನಾವು ಅದರ ಸರಿಯಾದ ಹಾಗೂ ಯೋಗ್ಯವಾದ ಉಪಯೋಗವನ್ನು ಮಾಡಿಕೊಳ್ಳುತ್ತಿರುವೆವು.

## ಮುಕ್ತಾಯ

ಆದುದರಿಂದ, ಇಡೀ ಹೊಸ ಒಡಂಬಡಿಕೆಯ ಸಭೆಯು, ಕ್ರಿಸ್ತನ ಆತ್ಮಿಕ ದೇಹವು ಮಾನವನಾಗುವುದರಲ್ಲಿ ಕ್ರಿಸ್ತನ ನಿಯೋಗದ ಸೃಷ್ಟಿಯಾಗಿದೆ ಎಂಬುದನ್ನು ಬೋಧಿಸಲು ಒಂದುಗೂಡುತ್ತದೆ. ಅದರ ವಾಗ್ದಾನ ಮಾಡುವುದರಿಂದ ಸುವಾರ್ತೆಗಳು ಅದನ್ನು ಒಪ್ಪಿಕೊಳ್ಳು ತ್ತವೆ, ಅದನ್ನು ಚಿತ್ರೀಕರಿಸುವುದರಿಂದ ಅಪೊಸ್ತಲರ ಕೃತ್ಯ ಅದನ್ನು ದೃಢಪಡಿಸುತ್ತದೆ, ಮತ್ತು ಪತ್ರಿಕೆಗಳು ಅದನ್ನು ವ್ಯಾವಹಾರಿಕ ಜೀವನಕ್ಕೆ ಅನ್ವಯಿಸುವುದರಿಂದ ಪುನಃ ಒಪ್ಪಿಕೊಳ್ಳುತ್ತವೆ.

ಹೊಸ ಒಡಂಬಡಿಕೆಯು, ನಮ್ಮ ರಕ್ಷಣೆಗಾಗಿ ಜೀವಿಸಿದ, ಮರಣ ಹೊಂದಿದ ಮತ್ತು ಸತ್ತವರೊಳಗಿಂದ ಎದ್ದು ಬಂದ ಒಬ್ಬಾತನಿಗೆ ಉತ್ತರ ಕೊಡುವುದಕ್ಕೆ ಒಂದೇ ಮಾರ್ಗವು ಆತನ ಸಭೆಯನ್ನು ಪ್ರವೇಶಿಸುವುದು ಮತ್ತು ಅದರ ನಂಬಿಗಸ್ತ ಸದಸ್ಯರಂತೆ ಜೀವಿಸುವುದು ಎಂದು ಹೇಳುವುದರಿಂದ, ಅದನ್ನು ಅನುಸರಿಸುವ ಪ್ರಶ್ನೆ ಇದಾಗಿದೆ: "ನೀನು ಆತನ ದೇಹದಂತೆ ಜೀವಿಸುತ್ತಿರುವಿಯೋ?" ಜೀವನದ ಅಂತ್ಯಕ್ಕೆ ಬಂದು, ನೀನು ಜೀವನದ ನಿಜವಾದ ಉದ್ದೇಶವನ್ನು ಸಂಪೂರ್ಣವಾಗಿ ಕಳೆದು ಕೊಂಡಿರುವಿ ಎಂಬುದನ್ನು ಕಂಡುಕೊಳ್ಳುವುದು ಎಂಥದೊಡ್ಡ ತಪ್ಪಾಗಿರುವುದಲ್ಲವೇ? ಬಹುಶಃ ಇದಕ್ಕಿಂತಲೂ ಹೆಚ್ಚು ದುಃಖಕರವಾದದ್ದು ಇರುವುದು - ಈ ಭೂಲೋಕಕ್ಕೆ ದೇವರ ಕುಮಾರನು ಯಾವ ಉದ್ದೇಶದಿಂದ ಬಂದನು ಎಂಬುದನ್ನು ಕಳೆದುಕೊಳ್ಳುವುದು. ಹೊಸ ಒಡಂಬಡಿಕೆಯು ನಮಗೆ ರಕ್ಷಣೆಯ ದೇವರ ದೈವಿಕ ಸಂದೇಶವನ್ನು ಕೊಡುವುದು ನಿಶ್ಚಿತವಾದಂತೆ, ಮಾನವ ರೂಪದಲ್ಲಿ ಕ್ರಿಸ್ತನು ಭೂಲೋಕಕ್ಕೆ ಬಂದದ್ದು ನಿಶ್ಚಿತವಾಗಿದ್ದಂತೆ, ಆತನು ದೇಹದಲ್ಲಿ ಪ್ರವೇಶಿಸದ ಯಾವನೇ ಆಗಲಿ ಅವನು ಜೀವನದ ಪ್ರಯಾಣದ ಅಂತ್ಯದಲ್ಲಿ, ಯೇಸುವು ಈ ಭೂಲೋಕಕ್ಕೆ ಯಾಕೆಬಂದನು ಎಂಬ ಕಾರಣವನ್ನು ತಪ್ಪಿಸಿಕೊಂಡಿದ್ದಾನೆ ಎಂಬುದನ್ನು ಕಲಿತುಕೊಳ್ಳುವನು. *ಈ ನಿರ್ಣಯವು ಇಡೀ ಹೊಸ ಒಡಂಬಡಿಕೆಯ ಮೂಲ ಬೋಧನೆಯಾಗಿರುವುದು!*

ಕ್ರಿಸ್ತನು ಇಲ್ಲಿಯ ತನ್ನ ಅಲ್ಪಕಾಲದ ಜೀವನದ ಅಂತ್ಯಕ್ಕೆ ಬಂದಾಗ, ಆತನು,

"ತಂದೆಯೇ ನನಗೆ ಮಾಡಬೇಕೆಂದು ಹೇಳಿದ್ದನ್ನು ನಾನು ಮಾಡಿದ್ದೇನೆ, ನನಗಾಗಿ ನೀನು ನೇಮಿಸಿದ ಕಾರ್ಯವನ್ನು ನೆರವೇರಿಸಿದ್ದೇನೆ" ಎಂದು ಹೇಳಬಲ್ಲವನಾದನು. ಸ್ವಾರ್ಥಸಾಧನೆಗಳ ರಾಜ್ಯದ ಮೇಲೆ ಆಳುತ್ತ, ಒಂದು ಅರಮನೆಯಲ್ಲಿ ದೀರ್ಘಜೀವನ ಜೀವಿಸುವುದಕ್ಕಿಂತ, ದೇವರ ಚಿತ್ತದ ವೃತ್ತದೊಳಗೆ, ಆತನ ಉದ್ದೇಶಗಳನ್ನು ನೆರವೇರಿ ಸುತ್ತ, ಈ ಭೂಲೋಕದಲ್ಲಿ ಕೆಲವು ವರ್ಷ ಜೀವಿಸುವುದು ಹೆಚ್ಚು ಉತ್ತಮವಾಗಿದೆ, ಜೀವನದ ಅಂತ್ಯದಲ್ಲಿ, ಬಹಳಷ್ಟು ಜನರು, "ದೇವರೇ, ಈ ಭೂಲೋಕದಲ್ಲಿ ನೀನು ನನಗೆ ಕೊಟ್ಟ ವರ್ಷಗಳನ್ನು ನಾನು ಜೀವಿಸಿದ್ದೇನೆ, ಮತ್ತು ನಾನು ಮಾಡಬೇಕೆಂದು ಬಯಸಿದ್ದನ್ನು ಮಾತ್ರವೇ, ನಾನು ಮಾಡಿದ್ದೇನೆ. ನಾನೇ ಆಯ್ದುಕೊಂಡ ನಿಯೋಗವನ್ನು ಅನುಸರಿಸಿದ್ದೇನೆ" ಎಂದು ಹೇಳುವರು.

ನಾವು ಜೀವನದ ಅಂತ್ಯಕ್ಕೆ ಬರುವಾಗ, ಆಶ್ಚರ್ಯಕರವಾದ ಮಟ್ಟಕ್ಕೆ, ಹೀಗೆ ಹೇಳು ವಂತಾಗಲಿ, "ಕರ್ತನೇ, ಪರಿಶುದ್ಧ ಬರಹಗಳಿಂದ ನಾನು ಏನಾಗಿರಬೇಕು ಮತ್ತು ಮಾಡಬೇಕು ಎಂಬುದನ್ನು ನೀನು ಬಯಸಿದ್ದನ್ನು ಕಂಡುಕೊಂಡೆನು, ಮತ್ತು ಆ ಸೇವೆಗೆ ನನ್ನನ್ನು ಸಮರ್ಪಿಸಿಕೊಂಡಿದ್ದೇನೆ. ಭೂಲೋಕದಲ್ಲಿ ನಾನು ನಿನ್ನನ್ನು ಯಥಾರ್ಥ ವಾಗಿ ಮಹಿಮೆಪಡಿಸಲು ಪ್ರಯತ್ನಿಸಿದ್ದೇನೆ. ನೀನು ನನಗೆ ಕೊಟ್ಟ ಯೋಜನೆಯಂತೆ ಜೀವಿಸಲು ಪ್ರಯತ್ನಿಸಿದ್ದೇನೆ. ಕ್ರಿಸ್ತನ ಸಭೆಯಂತೆ ನಾನು ಜೀವಿಸಿದ್ದೇನೆ."

ಟಿಪ್ಪಣಿ

[1]ಇವುಗಳನ್ನೂ ಸಹ ನೋಡಿರಿ: ಮತ್ತಾಯ 9:30; 12:16; 17:9; ಮಾರ್ಕ 1:44; 3:12; 5:43; 7:36; 8:30; 9:9; ಲೂಕ 4:41; 8:56; 9:21. "ಯಾರಿಗೂ ಹೇಳಬೇಡ" ಎಂಬ ವಿಚಿತ್ರವಾದ ಆಜ್ಞೆಯ ಬಗ್ಗೆ J. W. McGarvey ಬರೆದಿದ್ದಾರೆ: "ಜನರಲ್ಲಿ ಅನಾವಶ್ಯಕವಾದ ಉದ್ದೇಶಗಳು ಎದ್ದು ಮಿಲಿಟರಿ ಅಧಿಕಾರಿಗಳು ಮಧ್ಯೆ ಪ್ರವೇಶಸುವದನ್ನು ತಡೆಗಟ್ಟುವದಕ್ಕಾಗಿ, ಯೇಸುವಿನ ಬೋಧನೆಗಳಿಗೆ ಸಂಬಂಧಿಸಿ ಶಾಂತವಾದ ವಿಚಾರ ಮಾಡಲು ಜನರು ಸಾಮರ್ಥ್ಯವಿಲ್ಲದವರಾದುದರಿಂದ, ಇದು ಹೇಳಲ್ಪಟ್ಟಿದೆ. (ಹೋಲಿಸು. ಮಾರ್ಕ 1:45.) ಕೆಲವು ಸಲ, ಸಂದರ್ಭಕ್ಕನುಸಾರವಾಗಿ, ಆತನು ತನ್ನ ಮಾರ್ಗವನ್ನು ಬದಲಾಯಿಸಿದನು, ಮತ್ತು ಜನರಿಗೆ ತಾನು ಏನು ಮಾಡಿದ್ದೇನೆಂದು ಹೇಳಲು ಅವರಿಗೆ ಆಜ್ಞಾಪಿಸಿದನು" (J. W. McGarvey, *The New Testament Commentary: Matthew and Mark* [N.p., 1875; reprint, Delight, Ark.: Gospel Light Publishing Co., n.d.], 75).

## ಅಧ್ಯಯನಕ್ಕಾಗಿ ಮತ್ತು ಚರ್ಚೆಗಾಗಿ ಪ್ರಶ್ನೆಗಳು

1. ಜಗತ್ತಿನ ಇತಿಹಾಸದಲ್ಲಿ ಸಂಭವಿಸಿದ ಅತೀ ದೊಡ್ಡ ಘಟನೆಯು ಯಾವುದು? ನಿಮ್ಮ ಉತ್ತರಕ್ಕಾಗಿ ಕಾರಣಗಳನ್ನು ಕೊಡಿರಿ?
2. ಯೇಸುವು ಸಂಪೂರ್ಣವಾಗಿ ಮನುಷ್ಯನಾಗಿದ್ದನೋ ಇಲ್ಲವೇ ಕೇವಲ ಭಾಗಶಃವಾಗಿ ಮನಷ್ಯನಾಗಿದ್ದನೋ?
3. ಯೇಸುವು ಸಂಪೂರ್ಣವಾಗಿ ದೈವಿಕನಾಗಿದ್ದನೋ ಇಲ್ಲವೇ ಕೇವಲ ಭಾಗಶಃವಾಗಿ ದೇವರಾಗಿದ್ದನೋ?
4. ಯೇಸುವು ಭೂಲೋಕಕ್ಕೆ ಯಾಕೆ ಬಂದನು? ಯಾವ ಒಂದು ಉದ್ದೇಶವನ್ನು ಪೂರೈಸಲು ಆತನು ಬಂದನು?
5. ಅದಕ್ಕೆ ಯೇಸುವಿನ ಸೇವೆಯು ಅಪರಿಪೂರ್ಣ ಪಾತ್ರವಿತ್ತೆಂದು ನೀವು ಹೇಳುವಿರೋ?
6. ಯೇಸುವು ತನ್ನ ಸೇವೆಯ ಅವಧಿಯಲ್ಲಿ ಜಗತ್ತನ್ನು ಸುವಾರ್ತಾ ಉಪದೇಶದಿಂದ

ತುಂಬಬೇಕೆಂದು ಪ್ರಯತ್ನಿಸಿದನೋ?

7. ಯೇಸುವಿನ ಸೇವೆಯು ಬರಲಿಕ್ಕಿದ್ದ ಒಂದಕ್ಕಾಗಿ ಹೇಗೆ ಸಿದ್ಧತೆಯಾಗಿತ್ತೆಂಬುದನ್ನು ತೋಲಿಸಿಲಿ.
8. ನಮ್ಮ ಕರ್ತನು ಉಪಯೋಗಿಸಿದ ವಿಧಾನಗಳನ್ನೇ ನಾವು ಇಂದು ಉಪಯೋಗಿಸ ಬಹುದೋ? ಯಾಕೆ ಅಥವಾ ಯಾಕೆ ಅಲ್ಲ ಎಂಬುದಕ್ಕೆ ನಿಮ್ಮ ಕಾರಣಗಳನ್ನು ಕೊಡಿಲಿ.
9. ಹೊಸ ಒಡಂಬಡಿಕೆಯಲ್ಲಿ ಪತ್ರಿಕೆಗಳ ಕಾರ್ಯವು ಯಾವುದು?
10. ಯೇಸುವಿನ ಭೂಲೋಕದ ಸೇವೆಗೆ ಇಂದು ನಾವು ಹೇಗೆ ಉತ್ತರ ಕೊಡಬೇಕು?
11. ಆತನ ಸಭೆಯಾಗಿರದೇ ಯೇಸುವಿನ ಜೀವಿತಕ್ಕೆ ನಾವು ಯೋಗ್ಯವಾಗಿ ಉತ್ತರ ಕೊಡಬಹುದೋ?
12. ಆತನ ಸಭೆಯಂತೆ ಜೀವಿಸದೇ ಈ ಜಗತ್ತಿನಲ್ಲಿ ಯೇಸುವಿನ ನಿಯೋಗವನ್ನು ನಾವು ನೆರವೇಲಿಸಬಹುದೋ?

© 2009 Truth for Today